

ಕೆಸರಿನ ನೀರಿನಲ್ಲಿ ಜೋಡಿ ಗೂಳಿಗಳ ಬಾಲ ಹಿಡಿದು ಅವುಗಳೊಂದಿಗೆ ಸಾಗಿ ಬರುವ ಧೀರ ಜಾರಿ ಕೆಳಗೆ ಬೀಳುತ್ತಿದ್ದಂತೆಯೇ 'ಹೊಯ್ ಹೊಯ್...' ಎಂದು ನೋಡುಗರು ಕೇಕೆ ಹಾಕುತ್ತಾರೆ. ಟಣ್ ಟಣ ಟಣ್... ಎಂದು ಲಯಬದ್ಧವಾಗಿ ಬಾರಿಸುವ ವಿಶಿಷ್ಟ ವಾದ್ಯದ ಸದ್ದಿನ ಹಿಮ್ಮೇಳದಲ್ಲಿ ಕೆಸರುಗದ್ದೆಯಲ್ಲಿ ಗೂಳಿಗಳ ಓಟವನ್ನು ನೋಡುವಾಗ ನಮ್ಮಲ್ಲಿನ ಕಂಬಳ ನೆನಪಾಗುತ್ತದೆ. ಇದನ್ನು 'ಪಾಚೂ ಜಾವಿ' ಎಂದು ಅವರು ಕರೆಯುವರು. ಪಾಚೂ ಅಂದರೆ ವೇಗ ಮತ್ತು ಜಾವಿ ಎಂದರೆ ಗೂಳಿ ಎಂದರ್ಥ.

ಛಾಯಾಗ್ರಹಣಕ್ಕೆಂದು ಇಂಡೋನೇಷ್ಯ ದೇಶದ ಪಶ್ಚಿಮ ಸುಮಾತ್ರಾ ಪ್ರಾಂತ್ಯಕ್ಕೆ ಹೋಗಿದ್ದ ನಾವು ಆರು ಮಂದಿಗೆ, ಪರಂಬಹನ್ ಗ್ರಾಮದಲ್ಲಿ ನಡೆದ ಈ ಕೆಸರಿನ ಗದ್ದೆಯ ವಿಶಿಷ್ಟ ಕ್ರೀಡೆಯನ್ನು ನೋಡಿ ಫೋಟೊ ಕ್ಲಿಕ್ಕಿಸುವ ಅವಕಾಶ ಲಭಿಸಿತು.

ಇಂಡೋನೇಷ್ಯದ ಪಶ್ಚಿಮ ಸುಮಾತ್ರದಲ್ಲಿ 'ಪಾಚು ಜಾವಿ' ಎಂಬ ಗೂಳಿ ಓಟವನ್ನು ಸಾಂಪ್ರದಾಯಿಕ ಆಚರಣೆಯಾಗಿ ನಡೆಸಲಾಗುತ್ತದೆ. ತಾನಾಹ್ ದತಾರ್ ಎಂಬ ಪ್ರಾಂತ್ಯದ ವಿವಿಧ ಜಿಲ್ಲೆಗಳಲ್ಲಿ ಈ ಪಾಚು ಜಾವಿ ವಾರಾಂತ್ಯದಲ್ಲಿ ನಡೆಯುತ್ತದೆ. ಒಂದೊಂದು ಜಿಲ್ಲೆಯಲ್ಲೂ ಕೆಲವೊಮ್ಮೆ ನಾಲ್ಕು ವಾರಗಳ ಕಾಲ ನಡೆಯುತ್ತದೆ. ಭತ್ತವನ್ನು ಹೆಚ್ಚಾಗಿ ಬೆಳೆಯುವ ಈ ಭಾಗದಲ್ಲಿ ನಾಟಿ ಮಾಡುವ ಮುನ್ನಾದಿನಗಳಲ್ಲಿ ಇದನ್ನು ಆಯೋಜಿಸಲಾಗುತ್ತದೆ.

ಗೂಳಿಗಳಿಗೆ ಮರದ ಉಳುಮೆ ಉಪಕರಣವನ್ನು ಕಟ್ಟಿರುತ್ತಾರೆ. ಎರಡು ಕೆರಳಿದ ಗೂಳಿಗಳು ರಭಸದಿಂದ ಕೆಸರಿನಲ್ಲಿ ಓಡುವಾಗ, ಅತ್ಯಂತ ಕೆಚ್ಚೆದೆಯ ರೈಡರ್, ತನ್ನ ಕಾಲುಗಳನ್ನು ಗೂಳಿಗಳಿಗೆ ಕಟ್ಟಿದ ಉಳುಮೆ ಕೋಲಿನ ಮೇಲಿಟ್ಟುಕೊಂಡು ಅವುಗಳ ಬಾಲವನ್ನು ಹಿಡಿದಿರುತ್ತಾನೆ. ಮೇಲೆ ಚಿಮ್ಮುವ ಕೆಸರಿನ ನೀರು ಒಂದೆಡೆಯಾದರೆ, ಎರಡು ಗೂಳಿಗಳಿಗೆ ಕಟ್ಟಿರುವ ಉಳುಮೆ ಕೋಲಿನ ಮೇಲೆ ನಿಂತು ಸಂಭಾಳಿಸಿಕೊಂಡು ಸಾಗುವ ಚಾತುರ್ಯ, ಕೌಶಲ, ಧೈರ್ಯ, ಶಕ್ತಿ ಊಹಿಸಲಸಾಧ್ಯ. ಕೆಲವರಂತೂ ಗೂಳಿಗಳ ವೇಗ ಹೆಚ್ಚಿಸಲು ಅವುಗಳ ಬಾಲವನ್ನು ಕಚ್ಚುತ್ತಾರೆ! ಎರಡು ಗೂಳಿಗಳು ವಿರುದ್ಧ ದಿಕ್ಕಿನಲ್ಲಿ ಹೊರಟಾಗಂತೂ ಹಿಂದೆ ಇರುವ ವೀರನ ಎರಡು ಕಾಲು ಮತ್ತು ಕೈಗಳು ಎರಡು ದಿಕ್ಕಿಗೆ ಹೋಗಿಬಿಡುತ್ತವೆ!

ನೋಡುಗರ ಮೈ ಕೂಡ ಕೆಸರಿನ ಸಿಂಚನವಾಗಿರುತ್ತದೆ. ಕ್ಯಾಮೆರಾಗಳನ್ನು


ಸರ್ವೇಜನಃ ಸುಖಿನೋ ಭವಂತುಃ

ಸಮಸ್ಯೆ ನಿಮ್ಮದು ಪರಿಹಾರ ನಮ್ಮದು

ದಕ್ಷಿಣ ಭಾರತದಾದ್ಯಂತ ಜನಮನ್ನಣೆ ಪಡೆದಿರುವ ವಂಶಪಾರಂಪರಿಕ

ವಶೀಕರಣ ಮಾಂತ್ರಿಕರು

ಶ್ರೀಯುತ ಪರಶುರಾಮ್ ಗುರೂಜಿ



ಶ್ರೀ ಸಾಯಿಬಾಬ ಉಪಾಸಕರು

ಸ್ತ್ರೀ ಪುರುಷ ವಶೀಕರಣ, ಸತಿಪತಿ ಕಲಹ, ಡೈವೋರ್ಸ್ ಪ್ರಾಬ್ಲಮ್, ಸಾಲಬಾಧೆ, ಪ್ರೇಮವಿಚಾರ, ಸಂತಾನಫಲ, ವ್ಯಾಪಾರಾಭಿವೃದ್ಧಿ, ಜಮೀನು ವಿಚಾರ, ಕೋರ್ಟ್‌ಕೇಸ್, ಮಾಟಮಂತ್ರ, ಪ್ರೇತಬಾಧೆ ಇನ್ನಿತರ ನಿಮ್ಮ ಸಮಸ್ಯೆ ಏನೇ ಇರಲಿ ಎಷ್ಟೇ ಕಠಿಣವಾಗಿರಲಿ ಕೇರಳ ಮತ್ತು ಕೊಳ್ಳೇಗಾಲದ 16ನೇ ಶತಮಾನದ ಪ್ರಾಚೀನ ತಾಳೆಗ್ರಂಥದ ರಹಸ್ಯವಾದ ಮಹಾರುದ್ರಶೂಲ ಪ್ರಣವಶಕ್ತಿಯಿಂದ

ಕೇವಲ 5 ದಿನದಲ್ಲಿ 100% ಪರಿಹಾರ ಶತಸಿದ್ಧ

ನೀವು ಎಷ್ಟೋ ದೈವ, ದೇವಸ್ಥಾನ ಮತ್ತು ಜ್ಯೋತಿಷ್ಯರಲ್ಲಿ ಕೇಳಿ ಪರಿಹಾರ ಸಿಗದೆ ನೊಂದಿದ್ದರೆ ಶೀಘ್ರ ಪರಿಹಾರಕ್ಕಾಗಿ ಇವರನ್ನೊಮ್ಮೆ ಭೇಟಿಮಾಡಿ.

ಇಲ್ಲಿ ಹೇಳುವ ವಿಷಯವನ್ನು ಗುಪ್ತವಾಗಿಡಲಾಗುವುದು. ಹಾಗೂ ಗುರೂಜಿಯವರಲ್ಲಿ ನಿಸ್ಸಂಕೋಚದಿಂದ ಮಾತನಾಡಲು ಕರೆಮಾಡಿ:

ಖಾಯಂ ಮನೆ ವಿಳಾಸ: ಜೈಬಾಲಾಜಿ ಜ್ಯೋತಿಷ್ಯಂ 9620444460

ಬನಶಂಕರಿ ದೇವಸ್ಥಾನದ ಹತ್ತಿರ, ಮುಖ್ಯಬಸ್‌ನಿಲ್ದಾಣದ ಪಕ್ಕದಲ್ಲಿ, ಬನಶಂಕರಿ ಬೆಂಗಳೂರು.

ವಿಶೇಷ ಸೂಚನೆ: ಈ ಪೇಪರ್ ಕಟ್ಟಿಂಗ್ ತಂದವರಿಗೆ ಮುಜರಾಯಿ ಇಲಾಖೆ ಮತ್ತು ಧಾರ್ಮಿಕ ದತ್ತಿ ಇಲಾಖೆ ಹಾಗೂ ಮಾಡಾಯಿಕಾವ್ ಭಗವತಿ ದೇವಸ್ಥಾನಂ (ತಳಿಪರಂ) ಕೇರಳ ವತಿಯಿಂದ ಉಚಿತ ಸೇವೆಗಳು ಮತ್ತು ಪರಿಹಾರಗಳು ಲಭ್ಯವಿದೆ.